ದಿನಾಂಕಃ **13.09.2022** ರಂದು ಸಿಡಬ್ಲ್ಯೂ - 1 ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಮಾಡಿಸಲಾಯಿತು.

<u>ಪಾಟೀ ಸವಾಲುಃ</u> ಶ್ರೀ ಪಿ ಎಸ್ ಕೆ ಎದುರುದಾರರ ಪರ ವಕೀಲರಿಂದಃ

3. ಅಸಲು ದಾವೆ 18/2009 ರ ತೀರ್ಪನ್ನು ನಾನು ಓದಿಲ್ಲ, ಡಿಕ್ರಿಯನ್ನು ನಾನು ಓದಿದ್ದೇನೆ. ತೀರ್ಪಿನಲ್ಲಿ 1 ರಿಂದ 3 ನೇ ವಾದಿಯರು ಮತ್ತು 1 ರಿಂದ 11 ಮತ್ತು 18 ರಿಂದ 21 ನೇ ಪ್ರತಿವಾದಿಯರು ತಲಾ 1 ಅಂಶದ ಹಕ್ಕನ್ನು ಪಡೆಯಲು ಅರ್ಹರು ಎಂದು ಆದೇಶವಾಗಿದೆ ಎಂದರೆ ಸರಿ. ನನ್ನ ವರದಿಯ ಖಂಡಿಕೆ 2 ರಲ್ಲಿ ಆ ಬಗ್ಗೆ ನಮೂದಿಸಿರುತ್ತೇನೆ. ಡಿಕ್ರಿಯಲ್ಲಿ ಒಟ್ಟು ಪಾಲುಗಳ ಸಂಖ್ಯೆಯನ್ನು ನಮೂದಿಸಿಲ್ಲ ಎಂದರೆ ಸರಿ. ಕಮಿಷನ್ ವಾರೆಂಟ್‌ನೊಂದಿಗೆ ಅಂತಿಮ ಡಿಕ್ರಿ ಅರ್ಜಿಯನ್ನು ಲಗತ್ತಿಸಿರುವುದಿಲ್ಲ. ನಾನು ಅಂತಿಮ ಡಿಕ್ರಿ ಅರ್ಜಿಯನ್ನು ಗಮನಿಸಿಲ್ಲ. ಅಂತಿಮ ಡಿಕ್ರಿ ಅರ್ಜಿಯಲ್ಲಿ 760/768 ಪಾಲು ಅರ್ಜಿದಾರರಿಗೆ ನೀಡಬೇಕು ಎಂದು ಕಂಡುಬರುತ್ತದೆ ಎಂದರೆ ಸರಿ. ಸಾಕ್ಷಿಯು  ಅದರ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ.

4. ನನ್ನ ವರದಿಯ 2 ನೇ ಖಂಡಿಕೆಯಲ್ಲಿ ಅರ್ಜಿದಾರರಿಗೆ ಜಂಟಿಯಾಗಿ 107/108 ಅಂಶದ ಹಕ್ಕು ಮತ್ತು ಎದುರುದಾರರಿಗೆ 1/108 ಅಂಶದಲ್ಲಿ ಹಕ್ಕುಳ್ಳವರಾಗಿರುತ್ತಾರೆ ಎಂದು ನಮೂದಾಗಿರುತ್ತದೆ ಎಂದರೆ ಸರಿ. ಸಾಕ್ಷಿಯು ಮುಂದುವರಿದು ಡಿಕ್ರಿಯಲ್ಲಿ ಪ್ರಚೂರಪಡಿಸುವ ಎದುರುದಾರರು ಒಂದು ಹಕ್ಕಿನ ಒಬ್ಬ ವಾರೀಸುದಾರರಾಗಿರುವ ಕಾರಣ ಅವರ ಹಕ್ಕನ್ನು ನಾನು ಲೆಕ್ಕಚಾರ ಮಾಡಿ ನನ್ನ ವರದಿಯಲ್ಲಿ ಕಾಣಿಸಿರುತ್ತೇನೆ. ಆ ರೀತಿ ಪಾಲನ್ನು ಲೆಕ್ಕಾಚಾರ ಮಾಡುವಂತೆ

ಅರ್ಜಿದಾರರು ನನಗೆ ಜ್ಞಾಪನ ಪತ್ರವನ್ನಾಗಲೀ ಅಥವಾ ಅರ್ಜಿಯನ್ನಾಗಲೀ ಸಲ್ಲಿಸಿಲ್ಲ. ಸಾಕ್ಷಿಯು ಡಿಕ್ರಿಗೆ ಅನುಗುಣವಾಗಿ ಪಾಲನ್ನು ಲೆಕ್ಕಾಚಾರ ಮಾಡಿ ನನ್ನ ವರದಿಯಲ್ಲಿ ಕಾಣಿಸಿದ್ದೇನೆಂದು ನುಡಿಯುತ್ತಾರೆ. ನಾನು ವರದಿಯಲ್ಲಿ ಕಾಣಿಸಿರುವ ಲಕ್ಕಾಚಾರ ಡಿಕ್ರಿಗೆ ವಿರುದ್ದವಾಗಿದೆ ಎಂದರೆ ಸರಿಯಲ್ಲ. ವರದಿಯಲ್ಲಿ ನಾನು 768 ಪಾಲನ್ನು ಗಣನೆಗೆ ತೆಗೆದುಕೊಂಡಿಲ್ಲ. ಸಾಕ್ಷಿಯು ತನಗೆ ವಾರೆಂಟಿನಲ್ಲಿ ಆ ಬಗ್ಗೆ ನಿರ್ದೇಶನ ನೀಡಿಲ್ಲ ಎಂದು ನುಡಿಯುತ್ತಾರೆ ಮತ್ತು ಸದರಿ ಪ್ರೊಸೀಡಿಂಗ್ಸ್‌ನಲ್ಲಿ ಸದರಿ ಅಂಶವನ್ನು ಗಮನಕ್ಕೆ ತಂದಿಲ್ಲ. ಡಿಕ್ರಿಯಲ್ಲಿ ಹೇಳಿದ ಪಾಲಿಗೂ, ಅಂತಿಮ ಡಿಕ್ರಿಯಲ್ಲಿ ಹೇಳಿರುವ ಪಾಲಿಗೂ ಮತ್ತು ನನ್ನ ವರದಿಯಲ್ಲಿ ಕಾಣಸಿರುವಂತಹ ಪಾಲಿಗೂ ವ್ಯತ್ಯಾಸ ಇದ್ದು ತುಂಬಾ ಅಜಗಜಾಂತರವಾಗಿದೆ ಎಂದರೆ ಸಾಕ್ಷಿಯು ಡಿಕ್ರಿಯಲ್ಲಿ ಕಾಣಿಸಿದ ಪಾಲಿಗೆ ಅನುಗುಣವಾಗಿ ನನ್ನ ವರದಿಯಲ್ಲಿ ಪಾಲನ್ನು ವಿಂಗಡಿಸಿದ್ದು, ಅಂತಿಮ ಡಿಕ್ರಿಯ ಅರ್ಜಿಯಲ್ಲಿ ಕಾಣಿಸಿದ ಪಾಲಿನ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ.

5. ದಾವಾ ಆಸ್ತಿಯಲ್ಲಿ ಶ್ರೀನಿವಾಸ ದೇವಸ್ಥಾನ ಇದ್ದು, ಅದರ ಸುತ್ತಲಿನ ಕಟ್ಟಡವನ್ನು ನಾನು ನೋಡಿದ್ದೇನೆ. ನನ್ನ ವರದಿಯ ಖಂಡಿಕೆ 3 ರಲ್ಲಿ ಸದರಿ ದೇವಸ್ಥಾನ, ಅದರ ಗರ್ಭ ಗುಡಿ, ಸುತ್ತು ಪೌಳಿ ಎದುರಿನ ಅಂಗಣ ಮತ್ತು ಧ್ವಜಸ್ತಂಬ ಇತ್ಯಾದಿಗಳ ಬಗ್ಗೆ ನಮೂದಿಸಿರುತ್ತೇನೆ. ಡಿಕ್ರಿ ಶೆಡ್ಯೂಲ್‌ನಲ್ಲಿ ಅಂತಹ ದೇವಸ್ಥಾನ ಮತ್ತು ಕಟ್ಟಡಗಳ ಬಗ್ಗೆ ನಮೂದಾಗಿಲ್ಲ. ಡಿಕ್ರಿಯಲ್ಲಿ ಸದರಿ ದೇವಸ್ಥಾನ ಮತ್ತು ಅದಕ್ಕೆ ತಾಗಿಕೊಂಡಿರುವಂತೆ ಕಟ್ಟಡದ ಪಾಲಿನ ಬಗ್ಗೆ ಉಲ್ಲೇಖಿಸಿಲ್ಲ ಎಂದರೆ ಸರಿ. ಸದರಿ ದೇವಸ್ಥಾನ ಮತ್ತು ಅದಕ್ಕೆ ಹೊಂದಿಕೊಂಡಿರುವ ಕಟ್ಟಡ ದಾವಾ ಆಸ್ತಿಯಲ್ಲಿರುವ ಬಗ್ಗೆ

ಸದರಿ ಸ್ಥಳಕ್ಕೆ ಬೇಟಿ ನೀಡಿದ ಸಮಯದಲ್ಲಿ ನಾನು ನೋಡಿರುತ್ತೇನೆ. ಸಾಕ್ಷಿಗೆ ಸದರಿ ಶ್ರೀನಿವಾಸ ದೇವಸ್ಥಾನದ 2 ಭಾವಚಿತ್ರಗಳನ್ನು ತೋರಿಸಲಾಗಿ ಸಾಕ್ಷಿಯು ನನ್ನ ವರದಿಯಲ್ಲಿ ಉಲ್ಲೇಖಿಸಿರುವ ಶ್ರೀನಿವಾಸ ದೇವಸ್ಥಾನಕ್ಕೆ ಸಂಬಂಧಪಟ್ಟ ಭಾವ ಚಿತ್ರ ಎಂದು ಗುರುತಿಸಿರುತ್ತಾರೆ. ಸದರಿ ಭಾವಚಿತ್ರವನ್ನು ಒಟ್ಟಾಗಿ ನಿಆರ್-1 ಎಂದು ಗುರುತಿಸಲಾಯಿತು. ಸಾಕ್ಷಿಗೆ ಈ ಹಂತದಲ್ಲಿ ಇನ್ನೊಂದು ಭಾವಚಿತ್ರವನ್ನು ತೋರಿಸಲಾಗಿ ಸದರಿ ಭಾವಚಿತ್ರ ಶ್ರೀನಿವಾಸ ದೇವಸ್ಥಾನ ಒಳಾಂಗಣದ ಭಾವಚಿತ್ರ ಎಂದು ಸೂಚಿಸಲಾಗಿ ಸಾಕ್ಷಿಯು ನಾನು ಗರ್ಭ ಗುಡಿಯ ಸುತ್ತಲಿನ ಪ್ರಾಂಗಣಕ್ಕೆ ಹೋಗಿಲ್ಲ ಎಂದು ನುಡಿಯುತ್ತಾರೆ. ಶ್ರೀನಿವಾಸ ದೇವರ ಗರ್ಭಗುಡಿಯ ಸುತ್ತಲಿನ ಪ್ರಾಂಗಣದಲ್ಲಿ 9 ಪರಿವಾರ ದೇವರುಗಳ ಗುಡಿಗಳು ಇದೆ ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿಯು ಧ್ವಜಸ್ತಂಭದ ಭಾವಚಿತ್ರವನ್ನು ನೋಡಿ ಗುರುತಿಸಿದ್ದು, ನಿಆರ್-2 ಎಂದು ಗುರುತಿಸಲಾಯಿತು. ಪ್ರಧಾನ ದೇವಾಲಯದ ಸುತ್ತಲಿನ ಕಟ್ಟಡದ ಒಟ್ಟು 6 ಭಾವಚಿತ್ರಗಳನ್ನು ನೋಡಿ ಗುರುತಿಸಿದ್ದು, ಅದನ್ನು ಒಟ್ಟಾಗಿ ನಿಆರ್-3 ಎಂದು ಗುರುತಿಸಲಾಯಿತು. ಸದರಿ ಭಾವಚಿತ್ರದಲ್ಲಿ ಕಾಣಿಸಿರುವ ಎಲ್ಲಾ ಕಟ್ಟಡದ ಬಗ್ಗೆ ನನ್ನ ವರದಿಯ ಖಂಡಿಕೆ 3 ರಲ್ಲಿ ಉಲ್ಲೇಖಿಸಿರುತ್ತೇನೆ. ಸಾಕ್ಷಿಗೆ ದೇವಸ್ಥಾನದ ರಥದ ಭಾವಚಿತ್ರವನ್ನು ತೋರಿಸಲಾಗಿ ಅದನ್ನು ಒಪ್ಪಿದ್ದು, ನಿಆರ್-4 ಎಂದು ಗುರುತಿಸಲಾಯಿತು. ಸಾಕ್ಷಿಗೆ ಈ ಹಂತದಲ್ಲಿ ಎರಡು ಭಾವಚಿತ್ರಗಳನ್ನು ತೋರಿಸಲಾಗಿ ಸದರಿ ಭಾವಚಿತ್ರದಲ್ಲಿ ಕಂಡುಬರುವ ರಥ ನಾನು ಸ್ಥಳಕ್ಕೆ ಭೇಟಿ ನೀಡುವ ಸಮಯಲ್ಲಿತ್ತು, ಅದನ್ನು ಹೊರತುಪಡಿಸಿ ಭಾವಚಿತ್ರದಲ್ಲಿ ಕಂಡುಬರುವ ಉಳಿದ ಚಿತ್ರಣ ನಾನು ಭೇಟಿ ನೀಡುವ ಸಮಯದಲ್ಲಿ ಇರಲಿಲ್ಲ ಎಂದು ನುಡಿಯುತ್ತಾರೆ.

ಸದರಿ 2 ಭಾವಚಿತ್ರವನ್ನು ಒಟ್ಟಾಗಿ ನಿಆರ್-5 ಎಂದು ಗುರುತಿಸಲಾಯಿತು. ಸಾಕ್ಷಿಗೆ ಒಂದು ಭಾವಚಿತ್ರವನ್ನು ತೋರಿಸಿ ಅದು ದೇವಸ್ಥಾನದ ಮುಂಭಾಗದ ಪ್ರಾಂಗಣ ಎಂದು ಸೂಚಿಸಲಾಗಿ ಸಾಕ್ಷಿಯು ಒಪ್ಪಿದ್ದು, ಸದರಿ ಭಾವಚಿತ್ರವನ್ನು ನಿಆರ್-6 ಎಂದು ಗುರುತಿಸಲಾಯಿತು. ಸಾಕ್ಷಿಗೆ ಒಂದು ಬಾವಚಿತ್ರವನ್ನು ತೋರಿಸಲಾಗಿ ಅದು ದೇವಸ್ಥಾನದ ಬಲಭಾಗದ ಪ್ರಾಂಗಣದಲ್ಲಿದರುವ ಕಟ್ಟಡ ಎಂದು ಸೂಚಿಸಲಾಗಿ ಸಾಕ್ಷಿಯು ಯಾವ ಭಾಗದಲ್ಲಿರುವ ಕಟ್ಟಡ ಎಂದು ನನಗೆ ಹೇಳಲು ಸಾಧ್ಯವಿಲ್ಲ ಅದು ದೇವಸ್ಥಾನಕ್ಕೆ ಹೊಂದಿಕೊಂಡಂತೆ ಇರುವ ಕಟ್ಟಡ ಎಂದು ನುಡಿದಿದ್ದು, ಸದರಿ ಭಾವಚಿತ್ರವನ್ನು ನಿಆರ್-7 ಎಂದು ಗುರುತಿಸಲಾಯಿತು. ಸಾಕ್ಷಿಯು ದೇವಸ್ಥಾನದ ಮುಂಭಾಗದ ಅಂಗಣದ ಭಾವಚಿತ್ರವನ್ನು ನಿಆರ್-8 ಎಂದು ಗುರುತಿಸಲಾಯಿತು. ಸಾಕ್ಷಿಗೆ ಇನ್ನೊಂದು ಭಾವಚಿತ್ರವನ್ನು ತೋರಿಸಲಾಗಿ ಸದರಿ ಭಾವಚಿತ್ರದಲ್ಲಿ ಕಂಡುಬರುವ ಕಮಾನು ದಾವಾ ಆಸ್ತಿಯಲ್ಲಿ ಇರುವುದಿಲ್ಲ ಅದು ಸರ್ಕಾರಿ ಜಾಗದಲ್ಲಿ ಇದೆ ಎಂದು ನುಡಿಯುತ್ತಾರೆ. ಸದರಿ ಭಾವಚಿತ್ರವನ್ನು ನಿಆರ್-9 ಎಂದು ಗುರುತಿಸಲಾಯಿತು. ಇನ್ನೊಂದು ಭಾವಚಿತ್ರವನ್ನು ತೋರಿಸಲಾಗಿ ಸದರಿ ಭಾವಚಿತ್ರದಲ್ಲಿ ಕಂಡುಬರುವ ಪೂರ್ತಿ ಕಟ್ಟಡ ದಾವಾ ಆಸ್ತಿಯಲ್ಲಿ ಬರುವುದಿಲ್ಲ ಎಂದು ನುಡಿಯುತ್ತಾರೆ. ನಿಆರ್-9 ಭಾವಚಿತ್ರದಲ್ಲಿ ಕಂಡುಬರುವ ರಸ್ತೆ ದೇವಸ್ಥಾನದ ಪ್ರವೇಶ ದ್ವಾರದಿಂದ ಮುಖ್ಯ ರಸ್ತೆಗೆ ಹೋಗುವ ಸುಮಾರು 100 ಮೀ ವರೆಗಿನ ರಸ್ತೆಯಾಗಿರುತ್ತದೆ. ಸಾಕ್ಷಿಗೆ ಇನ್ನೊಂದು ಭಾವಚಿತ್ರವನ್ನು ತೋರಿಸಲಾಗಿ ಸದರಿ ಭಾವಚಿತ್ರದಲ್ಲಿ ಕಂಡುಬರುವ ಕಟ್ಟಡ ದೇವಸ್ಥಾನದ ಪ್ರವೇಶ ದ್ವಾರದಿಂದ ಸುಮಾರು 100 ಮೀ ದೂರದಲ್ಲಿ ಪೂರ್ವದಲ್ಲಿರುವ ಕಟ್ಟಡ ಎಂದು ಗುರುತಿಸುತ್ತಾರೆ. ಸದರಿ

ಭಾವಚಿತ್ರವನ್ನು ನಿಆರ್-10 ಎಂದು ಗುರುತಿಸಲಾಯಿತು. ನಿಆರ್-10 ರಲ್ಲಿ ಕಂಡುಬರುಂವಂತಹ ಕಟ್ಟಡವನ್ನು ನೋಡಿದಾಗ ಅದು ದಾವಾ ಆಸ್ತಿಯಲ್ಲಿರುವ ಕಟ್ಟಡ ಎಂದು ಕಂಡುಬರುತ್ತದೆ ಎಂದರೆ ಸಾಕ್ಷಿಯು ಅದರಲ್ಲಿ ಕಂಡುವಬರುವಂತಹ ಕಟ್ಟಡಕ್ಕೆ ಪ್ರತ್ಯೇಕವಾದ ಆವರಣ ಗೋಡೆಯನ್ನು ಕಟ್ಟಿದ್ದಾರೆ ಎಂದು ನುಡಿಯುತ್ತಾರೆ.

6. ಪ್ರಧಾನ ದೇವಸ್ಥಾನದ ವಯಸ್ಸನ್ನು ನಾನು ಅಂದಾಜು ಮಾಡಿಲ್ಲ. ಇತರ ಕಟ್ಟಡಗಳು ಸುಮಾರು 25 ವರ್ಷದ ಮೇಲ್ಪಟ್ಟ ಕಟ್ಟಡಗಳು ಆಗಿರುತ್ತವೆ. ಮೇಲ್ನೋಟಕ್ಕೆ ದೇವಸ್ಥಾವನ್ನು ನೋಡಿದಾಗ ಅದು ಸುಮಾರು 40 ವರ್ಷ ಹಳೆಯ ದೇವಸ್ಥಾನದ ಕಟ್ಟಡ ಎಂದು ಕಂಡುಬರುತ್ತದೆ ಎಂದರೆ ಸಾಕ್ಷಿಯು ಇರಬಹುದು ಎಂದು ನುಡಿಯುತ್ತರೆ. ಉಳಿದ ಕಟ್ಟಡಗಳು ಸುಮಾರು 30 ವರ್ಷದ ನಂತರದ ಕಟ್ಟಡಗಳು ಎಂದು ಕಂಡುಬರುತ್ತದೆ ಎಂದರೆ ಸರಿ. ಪ್ರಧಾನ ದೇವಸ್ಥಾನ ಮತ್ತು ಅದಕ್ಕೆ ಹೊಂದಿಕೊಂಡಿರುವ ಇತರ ಕಟ್ಟಡಗಳ ಮೌಲ್ಯಮಾಪನ ಮಾಡಿರುವುದಿಲ್ಲ ಸಾಕ್ಷಿಯು ನನ್ನ ಪ್ರತ್ಯೇಕ ವರದಿಯಲ್ಲಿ ಕಾಣಿಸಿರುತ್ತೇನೆ ಎಂದು ನುಡಿಯತ್ತಾರೆ. ಮೇಲ್ನೋಟಕ್ಕೆ ಪ್ರಧಾನ ದೇವಸ್ಥಾನ ಮತ್ತು ಅದಕ್ಕೆ ಹೊಂದಿಕೊಂಡಂತೆ ಇರುವ ಕಟ್ಟಡಗಳ ಮೌಲ್ಯ ಸುಮಾರು 25 ಕೋಟಿ ಆಗಬಹುದು ಎಂದರೆ ಸಾಕ್ಷಿಯು ಕಟ್ಟುವಾಗ ಅಷ್ಟು ಮೌಲ್ಯ ಇರಬಹುದು ಆದರೆ ಅದರ ಮೌಲ್ಯ ಈಗ ಅಷ್ಟು ಇರಲು ಸಾಧ್ಯವಿಲ್ಲ ಕಟ್ಟಡದಲ್ಲಿ ಸವಕಳಿ ಬರುತ್ತದೆ ಎಂದು ನುಡಿಯುತ್ತಾರೆ.

7. ಕಟ್ಟಡಗಳ ಮೌಲ್ಯಮಾಪನ ಮಾಡಿದ್ದೀರಾ ಎಂಬ ಪ್ರಶ್ನೆಗೆ ಸಾಕ್ಷಿಯು ಪ್ರತ್ಯೇಕವಾಗಿ 1 ನೇ ಶೆಡ್ಯೂಲ್ ನಲ್ಲಿ ಕಟ್ಟಡವನ್ನು ಕಾಣಿಸಿದ್ದು ಉಳಿದ ಜಾಗದ ಬಾಬ್ತು ನಾನು ಡಿಕ್ರಿಯಲ್ಲಿ ಕಾಣಿಸಿರುವ ಪಾಲಿಗೆ ಅನುಗುಣವಾಗಿ ವಿಂಗಡಿಸಿ ಎ ಮತ್ತು ಬಿ ಶೆಡ್ಯೂಲ್‌ನಲ್ಲಿ ಕಾಣಿಸಿರುತ್ತೇನೆ ಎಂದು ನುಡಿಯುತ್ತಾರೆ ಮತ್ತು ಎ ಮತ್ತು ಬಿ ಶೆಡ್ಯೂಲ್ ನಲ್ಲಿ ಕಟ್ಟಡಗಳು ಇರುವುದಿಲ್ಲ ಎಂದು ನುಡಿಯುತ್ತಾರೆ. 1 ನೇ ಶಡ್ಯೂಲ್‌ನಲ್ಲಿ ಕಾಣಿಸಿರುವ ಕಟ್ಟಡವನ್ನು ಪ್ರತ್ಯೇಕವಾಗಿ ಇರುವಂತೆ ಡಿಕ್ರಿಯಲ್ಲಿ ಕಾಣಿಸಿರುವುದಿಲ್ಲ ಎಂದರೆ ಸರಿ. ಸಾಕ್ಷಿಯು ನಾನು ಸ್ಥಳಕ್ಕೆ ಭೇಟಿ ನೀಡಿದ ಸಮಯದಲ್ಲಿ ಕಟ್ಟಡಗಳು ಕಂಡುಬಂದಿದ್ದು ಅದನ್ನು ಪ್ರತ್ಯೇಕವಾಗಿ 1 ನೇ ಶೆಡ್ಯೂಲಿನಲ್ಲಿ ಕಾಣಿಸಿದ್ದೇನೆ ಎಂದು ನುಡಿಯುತ್ತಾರೆ. ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸುವ ಪೂರ್ವದಲ್ಲಿ ದಾವಾ ಆಸ್ತಿಯಲ್ಲಿ ದೇವಸ್ಥಾನ ಮತ್ತು ಅದಕ್ಕೆ ಹೊಂದಿಕೊಂಡಿರುವ ಕಟ್ಟಡುಗಳು ಯಾವ ರೀತಿ ವಿಭಾಗಿಸಬೇಕು ಮತ್ತು ಮುಂದುವರಿಯಬೇಕು ಎನ್ನುವ ಬಗ್ಗೆ ಯಾವುದೇ ರೀತಿಯ ನಿರ್ಧೇಶನವನ್ನು ಪಡೆದುಕೊಂಡಿರುವುದಿಲ್ಲ. ಸಾಕ್ಷಿಯು ಸದರಿ ದೇವಸ್ಥಾನ ಮತ್ತು ಕಟ್ಟಡವನ್ನು ನನ್ನ ವರದಿಯಲ್ಲಿ ಪ್ರತ್ಯೇಕವಾಗಿ ಕಾಣಿಸಿದ್ದು, ಅದನ್ನು ಮುಂದಿನ ವಿಲೇವಾರಿ ಬಗ್ಗೆ ಸೂಕ್ತ ನಿರ್ಧೇಶನಕ್ಕಾಗಿ ನ್ಯಾಯಾಲಯದ ಮುಂದೆ ಮಂಡಿಸಿರುತ್ತೇನೆ.

8. ದಾವಾ ಆಸ್ತಿಯಲ್ಲಿರುವ ದೇವಸ್ಥಾನ ಮತ್ತು ಕಟ್ಟಡದ ಮೌಲ್ಯ ಮಾಪನ ಮಾಡದೇ ಆ ಕಾರಣದಿಂದ ನನ್ನ ವರದಿಯಲ್ಲಿ ಕಾಣಿಸಿರುವ ಎ ಮತ್ತು ಬಿ ಶೆಡ್ಯೂಲ್ ಆಸ್ತಿ ಅಳತೆಯಲ್ಲಿ ವ್ಯತ್ಯಾಸ ಕಂಡುಬರುತ್ತದೆ ಎಂದರೆ ಸರಿಯಲ್ಲ. ಮೌಲ್ಯಮಾಪನವನ್ನು

ಪರಿಗಣಿಸದೆ ನಾನು ಎ ಮತ್ತು ಬಿ ಶೆಡ್ಯೂಲ್‌ನ ಆಸ್ತಿಯನ್ನು ವಿಂಗಡಿಸಿ ಹಂಚಿಕೆ ಮಾಡಿದ್ದು, ಆ ಕಾರಣದಿಂದ ನಾನು ಸಲ್ಲಿಸಿರುವಂತಹ ವರದಿ ಅಪೂರ್ಣವಾಗಿದೆ ಮತ್ತು ಕಾನೂನು ಬಾಹಿರವಾಗಿದೆ ಎಂದರೆ ಸರಿಯಲ್ಲ.

9. ನಾನು ದಾವಾ ಆಸ್ತಿಗೆ ಬೆಳಿಗ್ಗೆ 10.00 ಗಂಟೆಗೆ ಭೇಟಿ ನೀಡಿದ್ದು ಎದುರುದಾರರು 11.30 ಗಂಟೆಗೆ ಬಂದಿರುತ್ತಾರೆ. ಎದುರುದಾರರು ನಿಆರ್‌-3 ರಲ್ಲಿ ಕಂಡುಬರುವ ಕಟ್ಟಡದಲ್ಲಿ ವಾಸವಾಗಿದ್ದಾರೆ ಎಂದರೆ ಸಾಕ್ಷಿಯು ಎದುರದಾರರು ಸದರಿ ವಿಚಾರವನ್ನು ನನ್ನ ಗಮನಕ್ಕೆ ತಂದಿಲ್ಲ ಮತ್ತು ನಾನು ಸ್ಥಳಕ್ಕೆ ಭೇಟಿ ನೀಡಿದ ಸಮಯದಲ್ಲಿ ಸದರಿ ವಿಚಾರ ನನ್ನ ಗಮನಕ್ಕೆ ಬಂದಿಲ್ಲ ಎಂದು ನುಡಿಯುತ್ತಾರೆ. ನಾನು ದಾವಾ ಆಸ್ತಿಗೆ ಭೇಟಿ ನೀಡಿದ ಸಮಯದಲ್ಲಿ ಎದುರುದಾರರ ಅಂದಿನ ಉಡುಪಿ ವಕೀಲರಿಗೆ ನಾನು ದೂರವಾಣಿ ಮೂಲಕ ಮಾಹಿತಿ ನೀಡಿದ್ದು, ಎದುರುದಾರರು ಸ್ಥಳದಲ್ಲಿ ಹಾಜರಿರುತ್ತಾರೆ ಎಂದು ನನಗೆ ಅವರು ಮಾಹಿತಿಯನ್ನು ನೀಡಿದ್ದರು. ಎದುರುದಾರರ ಅಂದಿನ ವಕೀಲರು ನಾನು ದಾವಾ ಆಸ್ತಿಗೆ ಭೇಟಿ ನೀಡುವ ಸಮಯದಲ್ಲಿ ಹಾಜರಿರಲಿಲ್ಲ. ವಕೀಲರಿಗೆ ಮಾಹಿತಿ ನೀಡಿದಾಗ ನನ್ನ ಕಕ್ಷಿದಾರರು ಸ್ಥಳಕ್ಕೆ ಬರುತ್ತಾರೆ ಎಂದು ಅವರೇ ನನ್ನಲ್ಲಿ ತಿಳಿಸಿದ್ದರು. ಎದುರುದಾರರ ಅಂದಿನ ವಕೀಲರು ಉಡುಪಿಯವರಾಗಿರುತ್ತಾರೆ. ಅವರಿಗೆ ನಾನು ನೋಟೀಸನ್ನು ನೋಂದಾಯಿತ ಅಂಚೆ ಮೂಲಕ ಕಳುಹಿಸಿರುತ್ತೇನೆ ಮತ್ತು ಕರೆ ಮಾಡಿ ಮಾಹಿತಿಯನ್ನು ನೀಡಿರುತ್ತೇನೆ. ಎದುರುದಾರರಿಗೆ ಕೂಡಾ ನೋಂದಾಯಿತ ಅಂಚೆ ಮೂಲಕ ನಾನು ಸ್ಥಳಕ್ಕೆ ಭೇಟಿ ನೀಡುವ ಬಗ್ಗೆ ನೋಟೀಸನ್ನು ನೀಡಿರುತ್ತೇನೆ. ನನನ್ನು ನ್ಯಾಯಾಲಯ ಆಯುಕ್ತನಾಗಿ ನೇಮಕಾತಿ ಮಾಡವ ಸಮಯದಲ್ಲಿ ಎದುರುದಾರರ

ವಕೀಲರು ಹಾಜರಿರಲಿಲ್ಲ ಎನ್ನುವ ಬಗ್ಗೆ ನನಗೆ ಗೊತ್ತಿರಲಿಲ್ಲ. ನಾನು ಎದುರುದಾರರಲ್ಲಿ ನ್ಯಾಯಾಲಯದಿಂದ ನಿಯೋಜಿಸಿದ ಆಯುಕ್ತ ಎಂದು ಮಾಹಿತಿಯನ್ನು ನೀಡಿದ್ದೆ. 10.00 ಗಂಟೆಗೆ ನಾನು ದಾವಾ ಆಸ್ತಿಗೆ ಭೇಟಿ ನೀಡಿದ್ದು 2.30 ಗಂಟೆಗೆ ಕಮಿಷನ್ ಕೆಲಸ ಮುಕ್ತಾಯಗೊಂಡಿರುತ್ತದೆ.

10. ಅರ್ಜಿಯಲ್ಲಿ ಕಾಣಿಸಿರುವಂತಹ ಅರ್ಜಿದಾರರ ಪರಿಚಯ ಇದೆ ಎಂದರೆ ಸಾಕ್ಷಿಯು 4 ನೇ ಅರ್ಜಿದಾರರನ್ನು ನೋಡಿ ಪರಿಚಯ ಇದೆ ಎಂದು ನುಡಿಯುತ್ತಾರೆ. 22 ನೇ ಅರ್ಜಿದಾರರಾದ ಶಶಿಕಾಂತ ರವರ ಪರಿಚಯ ನನಗೆ ಇಲ್ಲ. 25 ನೇ ಅರ್ಜಿದಾರರಾದ ಕೆ ಶೀನ ಮತ್ತು 26 ನೇ ಅರ್ಜಿದಾರರಾದ ಕೆ ವಿಠಲ ರವರ ಪರಿಚಯ ನನಗೆ ಇಲ್ಲ. 16 ನೇ ಅರ್ಜಿದಾರರಾದ ಪ್ರಕಾಶ್ ಯಾನೆ ಜಯಪ್ರಕಾಶ್‌ರವರ ಪರಿಚಯ ನನಗೆ ಇಲ್ಲ. ನನ್ನ ಎನ್ ರೋಲ್ ಮೆಂಟ್ ನಂ.ಕವಿಆರ್ 2729/2001. ನಾನು ದಸ್ತಾವೇಜುಗಳನ್ನು ತಯಾರಿಸುತ್ತೇನೆ. ಟ್ರಸ್ಟ್ ಡೀಡ್ ಗಳನ್ನು ಮಾಡುತ್ತೇನೆ. ಸಾಕ್ಷಿಗೆ ಒಂದು ಟ್ರಸ್ಟ್ ಡೀಡ್ ನ್ನು ತೋರಿಸಲಾಗಿ ಟ್ರಸ್ಟ್ ಡೀಡ್‌ನ್ನು ನಾನು ತಯಾರಿಸಿದ್ದೇನೆ ಎಂದು ನುಡಿಯುತ್ತಾರೆ. ಸದರಿ ದಾಖಲೆಯ ಜೆರಾಕ್ಸ್ ಪ್ರತಿಯನ್ನು ನಿಆರ್-11 ಎಂದು ಗುರುತಿಸಲಾಯಿತು. ಬಾಬು ಜೆ ಶೆಟ್ಟಿಯವರ ಮಾಹಿತಿಯ ಮೇರೆಗೆ ಸದರಿ ದಾಖಲೆಯನ್ನು ತಯಾರಿಸಿರುತ್ತೇನೆ ಅವರು ಮಹಾರಾಷ್ಟ್ರದಲ್ಲಿ ವಾಸವಾಗಿರುತ್ತಾರೆ. ನಿಆರ್-11 ರಲ್ಲಿ ಕಂಡುಬರುವ 2 ರಿಂದ 6 ನೇ ಪಕ್ಷಕಾರರು ಅಂತಿಮ ಡಿಕ್ರಿ ಅರ್ಜಿಯಲ್ಲಿ ಕಂಡುಬರುವ 4, 16, 22, 25 ಮತ್ತು 26 ನೇ ಅರ್ಜಿದಾರರು ಆಗಿರುತ್ತಾರೆ ಎಂದರೆ ನನಗೆ ಮಾಹಿತಿ ಇಲ್ಲ. ಸಾಕ್ಷಿಯು

ಅವರುಗಳ ಹೆಸರನ್ನು ಬಾಬು ಜೆ ಶೆಟ್ಟಿಯವರು ತಿಳಿಸಿದ ಮೇರೆಗೆ ನಿಆರ್-11 ರಲ್ಲಿ ಕಾಣಿಸಿದ್ದೇನೆ ಎಂದು ನುಡಿಯುತ್ತಾರೆ. ನಿಅರ್-11 ರ ಮೊದಲ ಖಂಡಿಕೆಯಲ್ಲಿ ಟ್ರಸ್ಟ್ ಡೀಡ್‌ನ ಆಸ್ತಿಗಳ ಬಗ್ಗೆ ಮತ್ತು ದಾವಾ ನಂ.18/2009 ರ ಬಗ್ಗೆ ಉಲ್ಲೇಖಿಸಲಾಗಿದೆ. ಸಾಕ್ಷಿಯು ಬಾಬು ಜೆ ಶೆಟ್ಟಿಯವರು ಕೊಟ್ಟ ಮಾಹಿತಿಯ ಮೇರೆಗೆ ಸದರಿ ಅಂಶಗಳನ್ನು ಕಾಣಿಸಿರುತ್ತೇನೆ ಎಂದು ನುಡಿಯುತ್ತಾರೆ. ನಿಆರ್-11 ರಲ್ಲಿ ಪ್ರವೀಣ್ ಭಟ್ ರವರು 1 ನೇ ಸಾಕ್ಷಿದಾರರಾಗಿ ಸಹಿ ಹಾಕಿದ್ದಾರೆ ಎಂದರೆ ಸಾಕ್ಷಿಯು ಪ್ರವೀಣ್ ಭಟ್ ರವರನ್ನು ನೋಡಿ ಪರಿಚಯ ಇದೆ, ಆದರೆ ಸಾಕ್ಷಿದಾರರು ಸಹಿ ಹಾಕುವ ಕಾಲಕ್ಕೆ ನಾನು ಹಾಜರಿರಲಿಲ್ಲ ಬಾಬು ಜೆ ಶೆಟ್ಟಿಯವರು ಸಹಿಯನ್ನು ಪಡೆದುಕೊಂಡಿರಬಹುದು ಎಂದು ನುಡಿಯುತ್ತಾರೆ. ಪ್ರವೀಣ್ ಭಟ್ ರವರು ಈ ಪ್ರಕರಣದಲ್ಲಿ ಪ್ರತಿ ಸುನಾವಣೆಯ ದಿನದಂದು ಹಾಜರಾಗುತ್ತಾರೆ ಎಂದರೆ ನನಗೆ ಗೊತ್ತಿಲ್ಲ, ಆದರೆ ಈ ದಿನಾಂಕದಂದು ಹಾಜರಾಗಿರುತ್ತಾರೆ ಮತ್ತು ಕೆಳ ನ್ಯಾಯಾಲಯದಲ್ಲಿ ಕ್ರಿಮಿನಲ್ ಪ್ರಕರಣದಲ್ಲಿಯೂ ಕೂಡಾ ಹಾಜರಾಗುತ್ತಾರೆ ಎಂದು ನುಡಿಯುತ್ತಾರೆ. ನಿಆರ್-11 ರಲ್ಲಿ ಪ್ರವೀಣ್ ಭಟ್ ಸನ್ ಆಫ್ ಕೆ ಎಸ್ ಹಿರ್ಗಾನ ಎಂದು ಕಾಣಿಸಿದ್ದಾರೆ ಎಂದರೆ ಸರಿ. ಕೆ ಎಸ್ ಹಿರ್ಗಾನ ಎಂದರೆ ಕೆ ಶೀನ ಹಿರ್ಗಾನ ಎಂದಾಗಿದ್ದು , ಅವರು ಈ ಪ್ರಕರಣದ ಓರ್ವ ಪಕ್ಷಕಾರರು ಎಂದರೆ ನನಗೆ ಗೊತ್ತಿಲ್ಲ. ಕೆ ಶೀನ ರವರು ಈ ಅರ್ಜಿಯಲ್ಲಿ 25 ನೇ ಅರ್ಜಿದಾರರಾಗಿದ್ದಾರೆ ಎಂದರೆ ಸಾಕ್ಷಿಯು ಕೆ ಶೀನ ರವರು 25 ನೇ ಅರ್ಜಿದಾರರಾಗಿದ್ದು, ಆದರೆ ಅದೇ ವ್ಯಕ್ತಿ ಕೆ ಎಸ್ ಹಿರ್ಗಾನ ಎಂಬ ವ್ಯಕ್ತಿ ಎಂದು ನನಗೆ ಹೇಳಲು ಸಾಧ್ಯವಿಲ್ಲ ಎಂದು ನುಡಿಯತ್ತಾರೆ. ಟ್ರಸ್ಟ್ ಡೀಡ್ ನ ಎಲ್ಲಾ ಪಕ್ಷಕಾರರು ಮತ್ತು ಸಾಕ್ಷಿದಾರರು ನಮ್ಮ ಸಮಕ್ಷಮ ಸಹಿ

ಹಾಕಿದ್ದಾರೆ ಎಂದರೆ ಸಾಕ್ಷಿಯು ಟ್ರಸ್ಟ್ ಡೀಡ್ ನಲ್ಲಿ ಬಾಬು ಜೆ ಶೆಟ್ಟಿ ಮಾತ್ರ ಪಕ್ಷಕಾರಾಗಿರುತ್ತಾರೆ ಎಂದು ನುಡಿಯುತ್ತಾರೆ. ನಿಆರ್-11 ದಾಖಲೆಯನ್ನು ತಯಾರಿಸುವ ಕಾಲಕ್ಕೆ ದಾವೆಗೆ ಸಂಬಂಧಪಟ್ಟ ದಾಖಲೆಗಳನ್ನು ನೀಡಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿಯು ನಿಆರ್-11 ರ ಪೂರ್ವದಲ್ಲಿ ಟ್ರಸ್ಟ್ ಡೀಡ್ ಇದ್ದು, ಅದರಲ್ಲಿ ಕಾಣಿಸಿರುವ ವಕ್ತಿಗಳು ಮೃತಪಟ್ಟಿರುವ ಕಾರಣ ನಿಆರ್- 11 ರಂತೆ ಟ್ರಸ್ಟ್ ಡೀಡ್ ಮಾಡಿರುತ್ತಾರೆ ಎಂದು ನುಡಿಯತ್ತಾರೆ. ಟ್ರಸ್ಟ್ ಡೀಡ್ ತಯಾರಿಸುವ ಸಮಯದಲ್ಲಿ ಅದರಲ್ಲಿ ಕಾಣಿಸಿರುವಂತಹ ಆಸ್ತಿಗಳು ದಾವೆಗೆ ಸಂಬಂಧಪಟ್ಟ ಆಸ್ತಿಗಳು ಎಂದು ನನಗೆ ತಿಳಿದಿರುತ್ತದೆ ಎಂದರೆ ಸಾಕ್ಷಿಯು ದಾವೆಯ ಬಗ್ಗೆ ನನಗೆ ಮಾಹಿತಿಯೇ ಇರಲಿಲ್ಲ ಎಂದು ನುಡಿಯುತ್ತಾರೆ. ನ್ಯಾಯಾಲಯದ ಆಯುಕ್ತನಾಗಿ ನನ್ನನ್ನು ನೇಮಿಸವ ಸಮಯಲ್ಲಿ ದಾವೆಯಲ್ಲಿ ಕಾಣಿಸಿರುವ ಆಸ್ತಿಗೆ ಸಂಬಂಧಪಟ್ಟಂತೆ ಟ್ರಸ್ಟ್ ಡೀಡ್ ಮಾಡಿದ್ದೇನೆ ಎನ್ನುವ ವಿಚಾರ ನನಗೆ ತಿಳಿದಿತ್ತು ಎಂದರೆ ಸರಿಯಲ್ಲ. ಟ್ರಸ್ಟ್ ಡೀಡ್ ನಲ್ಲಿ ಕಾಣಿಸಿರುವಂತಹ ಎಲ್ಲಾ ಪಕ್ಷಕಾರರು ನನ್ನ ಪರಿಚಯಸ್ಥರಾಗಿದ್ದು ಮತ್ತು ನನ್ನ ಕಕ್ಷಿದಾರರಾಗಿದ್ದು ಅವರು ನನ್ನ ಕಚೇರಿಗೆ ಇಂದಿಗೂ ಬರುತ್ತಿದ್ದಾರೆ ಎಂದರೆ ಸರಿಯಲ್ಲ. ಬಾಬು ಜೆ ಶೆಟ್ಟಿಯವರು ಕೊಟ್ಟ ಮಾಹಿತಿಯ ಮೇರೆಗೆ ನಾನು ಟ್ರಸ್ಟ್ ಡೀಡ್‌ನ್ನು ತಯಾರಿಸಿದ್ದೇನೆ ಎಂದು ನುಡಿಯುತ್ತಾರೆ. ಆ ಕಾರಣದಿಂದ ಅರ್ಜಿದಾರರ ಮೇಲೆ ನಾನು ಅನುಕಂಪವನ್ನು ಹೊಂದಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಡಿಕ್ರಿಗೆ ಅನುಗುಣವಾಗಿ ತಯಾರಿಸಿದ್ದೇನೆ ಎಂದು ನುಡಿಯತ್ತಾರೆ.

11. ನನಗೆ ನ್ಯಾಯಾಲಯದಿಂದ ವಾರೆಂಟ್ ನೀಡಿದ ನಂತರ ಪ್ರತಿ ಸುನಾವಣೆ ದಿನಾಂಕದಂದು ನಾನು ಮುಂದಿನ ಸುನಾವಣೆ ದಿನಾಂಕವನ್ನು ನೋಟ್ ಮಾಡಿಕೊಳ್ಳುತ್ತಿದ್ದೆ. ನನಗೆ ಕಮಿಷನ್ ವಾರೆಂಟನ್ನು ನೀಡುವ ಸಮಯದಲ್ಲಿ ಟ್ರಸ್ಟ್ ಡೀಡ್ ಬಗ್ಗೆ ನನ್ನ ನೆನಪಿಗೆ ಬಂದಿಲ್ಲ. ಒಂದೊಮ್ಮೆ ಟ್ರಸ್ಟ್ ಡೀಡ್ ಮಾಡಿದ್ದೇನೆ ಎನ್ನುವ ವಿಚಾರ ನಿಮ್ಮ ಗಮನಕ್ಕೆ ಬಂದಿದ್ದ ಪಕ್ಷದಲ್ಲಿ ನೀವು ಈ ಪ್ರಕರಣದಲ್ಲಿ ಕಮಿಷನ್ ವಾರೆಂಟ್‌ನ್ನು ಅಂಗೀಕರಿಸುತ್ತಿದ್ದೀರೋ ಎಂಬ ಪ್ರಶ್ನೆಗೆ ಸಾಕ್ಷಿಯು ನಾನು ಒಪ್ಪುತ್ತಿರಲಿಲ್ಲ ಎಂದು ನುಡಿಯುತ್ತಾರೆ. ದಿನಾಂಕ:12.01.2022 ರಂದು ಎದುರುದಾರರ ಕಡೆಯಿಂದ ಸಲ್ಲಿಸಿರುವ ಮೆಮೋದ ಬಗ್ಗೆ ನನ್ನ ಗಮನಕ್ಕೆ ಬಂದಿಲ್ಲ. ದಿನಾಂಕ: 02.03.2022 ರಂದು ಎದುರುದಾರರು ಕೇಸನ್ನು ಅಡ್ವಾನ್ಸ್ ಮಾಡಿ ಒಂದು ಜ್ಞಾಪನಾ ಪತ್ರ ಮತ್ತು ಅಂತಿಮ ಡಿಕ್ರಿಗೆ ಆಕ್ಷೇಪವನ್ನು ಸಲ್ಲಿಸಿರುವ ಬಗ್ಗೆ ಆಗಿರುವ ಕಾಲ ವಿಳಂಬವನ್ನು ಮನ್ನಿಸಿ ಆ ಬಗ್ಗೆ ಸಲ್ಲಿಸಿರುವ ಅರ್ಜಿ ಮತ್ತು ಆಕ್ಷೇಪ ಪತ್ರದ ಬಗ್ಗೆ ನನಗೆ ಮಾಹಿತಿ ಇಲ್ಲ. ನ್ಯಾಯಾಲಯದ ಆಯುಕ್ತರ ವರದಿಯನ್ನು ಸಲ್ಲಿಸುವ ಬಗ್ಗೆ 21.04.2022 ದಿನಾಂಕವನ್ನು ಗೊತ್ತು ಪಡಿಸಿತ್ತು ಎಂದರೆ ನನಗೆ ಗೊತ್ತಿಲ್ಲ.

12. ಸಾಕ್ಷಿಯು ನ್ಯಾಯಾಲಯದ ಸಿಎಸ್ ನಲ್ಲಿ 16.03.2022 ರಂದು ಎಂದು ನಮೂದಾಗಿದ್ದು ಆ ಪ್ರಕಾರ ನಾನು ದಿನಾಂಕವನ್ನು ನೋಟ್ ಮಾಡಿಕೊಂಡಿದ್ದೇನೆ ಎಂದು ನುಡಿಯುತ್ತಾರೆ. ದಿನಾಂಕ: 02.03.2022 ಕ್ಕೆ ಎದುರುದಾರರು ಅರ್ಜಿಯನ್ನು ಹಾಕಿ ಅಡ್ವಾನ್ಸ್ ಮಾಡಿದ ನಂತರ ಅವರು ಸಲ್ಲಿಸಿದ ಅರ್ಜಿಗೆ ಆಕ್ಷೇಪವನ್ನು ಸಲ್ಲಿಸಲು ಅರ್ಜಿದಾರರು 2 ವಾಯಿದೆಗಳನ್ನು ತೆಗೆದುಕೊಂಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಆ ರೀತಿ 2 ವಾಯಿದೆಗಳನ್ನು ತೆಗೆದುಕೊಂಡ ನಂತರ

ದಿನಾಂಕ:16.03.2022 ಕ್ಕೆ ಮುಂದಿನ ಸುನಾವಣೆ ದಿನಾಂಕವನ್ನು ಗೊತ್ತುಪಡಿಸಿದ್ದರು ಎಂದರೆ ಸಾಕ್ಷಿಯು 16.03.2022 ಕ್ಕೆ ಮುಂದಿನ ಸುನಾವಣೆ ದಿನಾಂಕ ಇದ್ದು, ಆದರೆ ಅರ್ಜಿದಾರರು ಆಕ್ಷೇಪ ಸಲ್ಲಿಸಲು 2 ವಾಯಿದೆ ತೆಗೆದುಕೊಂಡ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ. ದಿನಾಂಕ:16.03.2022 ರಂದು ಅರ್ಜಿದಾರರು ಎದುರುದಾರರು ಸಲ್ಲಿಸಿದ ಅರ್ಜಿ ಮೇರೆಗೆ ಅಕ್ಷೇಪವನ್ನು ಸಲ್ಲಿಸಿದ್ದರು ಎಂದರೆ ನನಗೆ ಗೋತ್ತಿಲ್ಲ. ಅದೇ ದಿನಾಂಕದಂದು ನಾನು ನನ್ನ ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿದ್ದೇನೆ ಎಂದೆರ ಸರಿ. ನನಗೆ ವರದಿಯನ್ನು ಸಲ್ಲಿಸಲು 21.04.2022 ರಂದು ದಿನಾಂಕ ನಿದಿಧಿಯಾಗಿದ್ದು ನಾನು ದಿನಾಂಕ:16.03.2022 ರಂದು ನನ್ನ ವರದಿಯನ್ನು ಸಲ್ಲಿಸಿದ್ದೇನೆ ಎಂದರೆ ಸಾಕ್ಷಿಯು ಸಿಎಸ್ ನಲ್ಲಿ ವರದಿಯನ್ನು ಸಲ್ಲಿಸಲು ದಿನಾಂಕ: 16.03.2022 ಎಂದು ದಿನಾಂಕ ನಿಗಧಿಯಾಗಿದ್ದು ವರದಿ ಸಿದ್ಧವಾಗಿದ್ದ ಕಾರಣ 16.03.02022 ರಂದು ನ್ಯಾಯಾಲಯಕ್ಕೆ ವರದಿಯನ್ನು ಸಲ್ಲಿಸಿದ್ದೇನೆ ಎಂದು ನುಡಿಯುತ್ತಾರೆ. ದಿನಾಂಕ: 21.04.2022 ರಿಂದ ಎದುರುದಾರರು ಕೇಸನ್ನು ಅಡ್ವಾನ್ಸ್ ಮಾಡಿದ ನಂತರ ಅವರ ಅರ್ಜಿಗೆ ಆಕ್ಷೇಪ ಸಲ್ಲಿಸಲು 16.03.2022 ರಂದು ದಿನಾಂಕ ನಿಗಧಯಾಗಿದ್ದು, ವರದಿ ಸಲ್ಲಿಸಲು ದಿನಾಂಕ ನಿಗಧಿಯಾಗಿರಲಿಲ್ಲ ಎಂದರೆ ಸರಿಯಲ್ಲ. ನಾನು ಈ ಪ್ರಕರಣದಲ್ಲಿನ ಕಲಾಪಗಳನ್ನು ಸೂಕ್ಷ್ಮವಾಗಿ ಅವಲೋಕಿಸುತ್ತಿದ್ದು ಆ ಪ್ರಕಾರ ದಿನಾಂಕ: 16.03.2022 ರಂದು ನನ್ನ ವರದಿಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಯು ನಾನು ಕೇವಲ ನ್ಯಾಯಾಲಯ ಗೊತ್ತು ಪಡಿಸಿದ ದಿನಾಂಕವನ್ನು ಬರೆದುಕೊಳ್ಳುತ್ತಿದ್ದೆ ಎಂದು ನುಡಿಯತ್ತಾರೆ. ಎದುರುದಾರರ ಅಂದಿನ ವಕೀಲರು ಅಂತಿಮ ಡಿಕ್ರಿ ಅರ್ಜಿಗೆ ಆಕ್ಷೇಪ ಸಲಿಸಿಲ್ಲ ಎನ್ನುವ ವಿಚಾರ ನನ್ನ ಗಮನಕ್ಕೆ

ಬಂದಿತ್ತು ಎಂದರೆ ಸರಿಯಲ್ಲ. ದಿನಾಂಕಃ02.03.2022 ರಂದು ಎದುರುದಾರರು ಕೇಸನ್ನು ಅಡ್ವಾನ್ಸ್‌ಮಾಡಿಸಿ ಅಂತಿಮ ಡಿಕ್ರಿ ಅರ್ಜಿಗೆ ಆಕ್ಷೇಪ ಸಲ್ಲಿಸಿರುವ ವಿಚಾರ ನನಗೆ ತಿಳಿದಿತ್ತು ಎಂದರೆ ಸರಿಯಲ್ಲ. ಎದುರುದಾರರು ಅಂತಿಮ ಡಿಕ್ರಿಗೆ ಸಲ್ಲಿಸಿರುವ ಆಕ್ಷೇಪವನ್ನು ನಾನು ಓದಿ ತಿಳಿದುಕೊಂಡಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಎದುರುದಾರರು ಆಕ್ಷೇಪ ಸಲ್ಲಸಿರುವ ಬಗ್ಗೆ ನನಗೆ ನೋಟೀಸು ನೀಡಿಲ್ಲ ಎಂದು ನುಡಿಯುತ್ತಾರೆ. ಆಕ್ಷೇಪ ಸಲ್ಲಿಸಿರುವ ಬಗ್ಗೆ ನನಗೆ ಮಾಹಿತಿ ಇದ್ದರೂ ಕೂಡಾ ನಾನು ತರಾತುರಿಯಲ್ಲಿ ದಿನಾಂಕಃ16.03.2022 ರಂದು ನನ್ನ ವರದಿಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಅರ್ಜಿದಾರರ ಕಡೆಯಿಂದ ನನಗೆ ಒತ್ತಡ ಇದ್ದು ಆ ಕಾರಣದಿಂದ ದಿನಾಂಕಃ 16.03.2022 ರಂದು ನಾನು ವರದಿಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ನ್ಯಾಯಾಲಯವು ಎದುರುದಾರರು ಸಲ್ಲಿಸಿರುವ ಆಕ್ಷೇಪಣೆಯನ್ನು ಪರಿಗಣಿಸುವ ಪೂರ್ವದಲ್ಲಿ ನಾನು ವರದಿಯನ್ನ್ನು ಸಲ್ಲಿಸಿರುವ ಕಾರಣ ಎದುರುದಾರರಿಗೆ ಅನ್ಯಾಯವಾಗಿದೆ ಎಂದರೆ ಸರಿಯಲ್ಲ.

((ಈ ಹಂತದಲ್ಲಿ ನ್ಯಾಯಾಲಯದ ಅವಧಿ ಮಗಿದಿರುವ ಕಾರಣ ಪಾಟೀಸವಾಲನ್ನು ಮುಂದೂಡಲಾಯಿತು.))

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ ಹೇ ಕೇ ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಎಸಿಜೆಎಂ.,

ಕಾರ್ಕಳ.